ಶ್ರೀನರಸಿಂಹಾಚಾರ್ಯರ ಮಾತು ಸಂಪೂರ್ಣವಾಗಿ ಸತ್ಯವಾಗಲಿ ನಿನ್ನ ಕೃಪೆಯಿಂದ!

ಇಂದು ಕಾರ್ತಿಕ ಶುದ್ಧ ದ್ವಾದಶಿ. ತುಲಸಿಯ ಲಗ್ನವು ಚೆನ್ನಾಗಿ ನೆರವೇರಿತು ನನ್ನಲ್ಲಿ. ಶ್ರೀ.ಜೋಶಿ ಮಾಸ್ತರರು ಕಬ್ಬುಗಳನ್ನು ತಂದು ಕೊಟ್ಟರು. ಮಂಟಪವನ್ನು ನಿರ್ಮಿಸಿದರು. ಶ್ರೀ.ಕಮಲಾಪುರರ ಮನೆಯಿಂದ ಜೋಳದ ದಂಟುಗಳು ಬಂದುವು. ವೃಂದಾವನವು ಬಹು ಶೃಂಗಾರವಾಯ್ತು. ಆಚಾರ್ಯರು ಸಕಾಲಕ್ಕೆ ಬಂದರು. ಪೆಟ್ರೊಮೆಕ್ಸ ಲೈಟ್! ಉತ್ಸಾಹವಿದ್ದಿತು!

ಸತ್ಯದ ಪ್ರಭಾವವು ಅಪರಿಮಿತವು. ಸತ್ಯವನ್ನು ಆಶ್ರಯಿಸಿದಾತನಿಗೆ ಭಯವಿಲ್ಲವೆಂಬುದನ್ನು ಸ್ವಾನುಭವದಿಂದ ಕಾಣುತ್ತಿರುವೆನು.

**2-11-41 ರಾತ್ರಿ 9.55**

ಬಾವಿಯ ಕೆಲಸವು ಸಾಗಿದೆ. ಮಣ್ಣು ಬಿರಿಸಿದೆ. ಹೇಡಿ ಮಣ್ಣು ಮತ್ತೆ ಬಾರದಷ್ಟೆ. ಹೊಳೆವ್ವನು ರಾಟಯನ್ನು ಕೊಟ್ಟಳು, ಪುಣ್ಯವಂತಿ. ನಾಳೆಯಿಂದ ಶಾಲೆ.

ಯಶವನ್ನು ಪಡೆವ ಆತುರತೆ ಸಲ್ಲದು. ಅಧಿಕಾರ ಲೋಲುಪತೆಯಷ್ಟೇ ಕೆಟ್ಟುದು ಯಶೋಲೋಲುಪತೆ. ಸತ್ಪಥದಲ್ಲಿ ನಡೆವುದು ನಮ್ಮ ಕರ್ತವ್ಯವು.

**3-11-41 ರಾತ್ರಿ 9.45**

ಬಾವಿಯ ಕೆಲಸವು ಸಾಗಿದೆ. ಮನೆಯ ಕೆಲಸವು ಬುಧವಾರ ಗುರುವಾರ ಪ್ರಾರಂಭವಾಗಬಹುದೆಂದು ಶ್ರೀ ಗೋಠೆ ಕೇಶವರಾಯರು ಇದೇ ಈಗ ಹೇಳಿದರು. ಮಾಘ ಶುದ್ಧ ಪಂಚಮಿಯ ಸಮಯಕ್ಕೆ ಮನೆ ಸಿದ್ಧವಾಗುವುದೆಂದು ಅವರ ವಚನ. ಉಪ್ಪರಿಗೆಯ ಕೆಲಸವು ಪೂರ್ಣವಾಗಲಿಕ್ಕಿಲ್ಲ. ಅಂತು ಇರಲಿಕ್ಕೆ ಹೋಗಬಹುದು. ಬಾವಿಗೆ ಸುಮಾರು 725 ರೂ.ಗಳು ಬೇಕಾಗಬಹುದೆಂದು ಅವರ ಅಭಿಪ್ರಾಯ. ಇಷ್ಟನ್ನು ಮಿಕ್ಕದು, ಕಡಿಮೆಯಾದರೂ ಆಗಬಹುದು ಎಂದೂ ಕೇಶವರಾಯರು ಹೇಳಿದರು.

ಶಾಲೆ ಇಂದು ಪ್ರಾರಂಭವಾಯ್ತು.

ಮುಂದೆ ನನ್ನ ಸ್ಥಿತಿ ಏನಾಗಬಹುದೆಂಬ ಯೋಚನೆ ಸಲ್ಲದು. ಕರ್ತವ್ಯ ಪರಿಪಾಲನೆಯಲ್ಲಿ ಆಯುಷ್ಯವನ್ನು ವ್ಯಯಿಸುವವನಿಗೆ ಮುಂದಿನ ಚಿಂತೆ ಏಕೆ? ಕರ್ತವ್ಯ ಪಾಲನೆ ಸಮಾಧಾನದ ಉಗಮಸ್ಥಾನವು.

**4-11-41 ರಾತ್ರಿ 10.30**

ಇಂದು ಬಾವಿಯ ಕೆಲಸವಿಲ್ಲ. ಮನೆಯ ಕೆಲಸವು ಇನ್ನೂ ಪ್ರಾರಂಭವಾಗಿಲ್ಲ. ಸಲಕಿನಕೊಪ್ಪದ ಜೋಶಿ ಮಾಸ್ತರರಿಗೆ ಮೊನ್ನೆ 2 ರೂ. ಇಂದು ಮತ್ತೆ 5ರೂ. ಹೀಗೆ ಏಳು ರೂ.ಗಳನ್ನು ಕೈಗಡ ಕೊಟ್ಟೆನು. ಹಾಲಿನವನಿಗೆ ರೂ.5-ಆ.4-ಪೈ.6 ಕೊಟ್ಟೆನು.

ಹೋಳಿಕಟ್ಟಿಯ ಸಾಹಾಯ್ಯದಿಂದ ಏನೇನೋ ಲೆಕ್ಕ ಹಾಕಿದೆನು. ಸುಮಾರು 3000 ರೂ.ಗಳ ಸಾಲವನ್ನು ಮಾಡಬೇಕಾಗುವುದು. ಐದಾರು ವರ್ಷಗಳಲ್ಲಿ ಮುಟ್ಟಿಸಲು ಬರಬಹುದು. ಯಾರ ಋಣದಲ್ಲಿಯೂ ಉಳಿವ ಪ್ರಸಂಗವು ಬಾರದು.

ನಿರ್ಮಲವಾದ ಅಂತಃಕರಣವಿದ್ದರೆ ಮನುಷ್ಯನಿಗೆ ಎಷ್ಟೊಂದು ಬಲವು! ನೈರ್ಮಲ್ಯವೇ ಬಲಕ್ಕೆ ಕಾರಣವು. ದುಡ್ಡು ಅಲ್ಲ, ಬುದ್ಧಿ ಅಲ್ಲ.

**5-11-41 ರಾತ್ರಿ 10.20**

ಇಂದು ಶ್ರೀ ದೇಸಾಯಿ ಗೋವಿಂದರಾಯರಿಗೆ ಪತ್ರ ಬರೆದೆನು. ಅವರಿಂದ ಬಂದ ಇನ್ನೂರು ರೂ.ಗಳನ್ನು ಐದು ವರ್ಷಗಳ ಅವಧಿಯಲ್ಲಿ ತಿರುಗಿ ಮುಟ್ಟಿಸುವೆನೆಂದು ತಿಳಿಸಿದ್ದೇನೆ. ನಾಳಿನ ಟಪಾಲಿನಿಂದ ಪತ್ರವು ಹೋಗುವುದು.

ರಾತ್ರಿ ಇಷ್ಟು ಹೊತ್ತಿನ ವರೆಗೆ ಗುಂಜಿಕರ ಧೀರಣ್ಣನಲ್ಲಿ ಕುಳಿತಿದ್ದೆ. ಗೋಠೆ ಕೇಶವರಾಯರೂ ನನ್ನೊಡನೆ ಬಂದಿದ್ದರು. ಕಟ್ಟಿಗೆಯ ವಿಷಯವನ್ನೂ ಬೇರೆ ಮಾತುಗಳನ್ನೂ ಕುರಿತು ಮಾತುಗಳಾದುವು.

ಅನೃಣರಾಗಲು ಮನುಷ್ಯರು ಯತ್ನಿಸಬೇಕು. ಋಣವು ತಪ್ಪಿದುದಲ್ಲ. ಆದರೆ ಅನೃಣನಾಗಲು ಪ್ರಯತ್ನಿಸುವುದು ಮಾನವನ ಕರ್ತವ್ಯವು. ನಂಬು, ಅಂತಃಕರಣಪೂರ್ವಕವಾಗಿ ನಂಬು. ಮೋಸ ಹೋಗುವೆನೆಂಬ ಚಿಂತೆ ನಿನಗೆ ಬೇಡ. ಅಸತ್ಯವೆಂದು ತೋರಿದಲ್ಲಿ ನಂಬಬೇಡ. ಸತ್ಯವೊ ಅಸತ್ಯವೊ ಎಂದು ಸಂಶಯವು ಬಂದರೆ ನಂಬಿಬಿಡು! ನಂಬುವುದಕ್ಕೆ ಧೈರ್ಯವು ಬೇಕು. ಅಂತಃಕರಣಪೂರ್ವಕವಾಗಿ ನಂಬಿದವನ ಕೈಯನ್ನು ಬಿಡನು ಶ್ರೀಹರಿ!

**6-11-41 ರಾತ್ರಿ 9.40**

ಬಾವಿಗೆ ಇಂದು ರಾಟಿ ಕೂಡಿಸಲ್ಪಟ್ಟಿತು. ಇನ್ನೂ